# ಪೌಷ್ಟಿಕ ಪುಡಿಯ ಸಶಕ್ತ ಉದ್ಯಮಿ!

■ ಪ್ರವೀಣ ಕುಲಕರ್ಣಿ



ಕೋವಿಡ್‌ನ ಸಂಕಟದ ಸುದ್ದಿಗಳೇ ಸುತ್ತು ಕಡೆ ತುಂಬಿರುವ ಈ ಸಂದರ್ಭದಲ್ಲಿ ಹಾಯ್ ಎನಿಸುವ ವರ್ತಮಾನವೊಂದು ಫೋಬ್ಸ್ ಪತ್ರಿಕೆಯಿಂದ ಬಂದಿದೆ. ಆ ಪತ್ರಿಕೆಯು ಬಿಡುಗಡೆ ಮಾಡಿರುವ 30 ವರ್ಷ ವಯಸ್ಸಿನೊಳಗಿನ ಏಷ್ಯಾದ ಸಾಧಕರ ಪಟ್ಟಿಯಲ್ಲಿ ಬೆಂಗಳೂರಿನ ಯುವ ಉದ್ಯಮಿ ವಿಭಾ ಹರೀಶ್ ಸ್ಥಾನ ಪಡೆದಿದ್ದಾರೆ. ಯಶಸ್ಸಿನ ಕನಸುಗಳನ್ನು ಕಂಗಳಲ್ಲಿ ತುಂಬಿಕೊಂಡಿರುವವರ ಮೊಗದಲ್ಲಿ ಮಂದಹಾಸವೊಂದು ಮಿಂಚಲೂ ಕಾರಣರಾಗಿದ್ದಾರೆ.

ಹಣ್ಣು, ಗಿಡಮೂಲಿಕೆ ಹಾಗೂ ಬೇರುಗಳನ್ನು ಬಳಸಿ ಪೌಷ್ಟಿಕಾಂಶ ಇರುವ ಪುಡಿಗಳನ್ನು ಸಿದ್ಧಪಡಿಸುವ ‘ಕಾಸ್ಮಿಕ್ಸ್’ (CosMix) ಹೆಸರಿನ ನವೋದ್ಯಮದ ಒಡತಿ ವಿಭಾ. ‘ಕಾಸ್ಮಿಕ್ಸ್’ ಉದ್ಯಮ ಸಿದ್ಧಪಡಿಸುವ ಪುಡಿಗಳೆಲ್ಲ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುತ್ತವಂತೆ. ಜಗತ್ತಿನ ಅರ್ಥವ್ಯವಸ್ಥೆಯೇ ನಿತ್ರಾಣವಾಗಿ ಮಲಗಿದ್ದಾಗ ‘ರೋಗ ನಿರೋಧಕ ಪುಡಿ’ ಹಿಡಿದುಕೊಂಡು ಬಂದು ಉದ್ಯಮವನ್ನು ಯಶಸ್ವಿಯಾಗಿ ಕಟ್ಟಿ ಬೆಳೆಸಿದ ಈ ಯುವತಿಯ ಸಾಧನೆ ಸುಮ್ಮನೆಯೇ ಮತ್ತೆ?!

ಏಷ್ಯಾದ ಸಾಧಕರ ಪಟ್ಟಿಯಲ್ಲಿ ಸ್ಥಾನ ಪಡೆದಿರುವವರು ದೀರ್ಘಾವಧಿಯ ಲಾಕ್‌ಡೌನ್‌ಅನ್ನು ತಾಳಿಕೊಂಡಿದ್ದಾರೆ, ಎಲ್ಲ ಕ್ಷೇತ್ರಗಳಲ್ಲೂ ಸೃಷ್ಟಿಯಾಗಿರುವ ಅನಿಶ್ಚಿತ ವಾತಾವರಣವನ್ನು ಎದುರಿಸಿ ನಿಂತಿದ್ದಾರೆ ಎಂದು ಫೋಬ್ಸ್ ಪ್ರಶಂಸಿಸಿದೆ. ಸಾಂಕ್ರಾಮಿಕ ತಂದ ಬದಲಾವಣೆಗಳ ನಡುವೆಯೇ ಈ ಸಾಧಕರೆಲ್ಲ ತಮ್ಮ ಉದ್ಯಮಗಳನ್ನು ಬೆಳೆಸಿದ್ದಾರೆ ಎಂದೂ ಹೇಳಿದೆ. ವಿಭಾ ಸಾಧನೆ ನೋಡಿದಾಗ, ಫೋಬ್ಸ್ ಹೇಳಿದ ಮಾತು ಎಷ್ಟೊಂದು ಸತ್ಯವಾಗಿದೆಯಲ್ಲ ಎಂದು ನಮಗೂ ಅನಿಸುತ್ತದೆ.

ಮಕ್ಕಳನ್ನು ಹೆರುವ ವಯಸ್ಸಿನ ಸ್ತ್ರೀಯರನ್ನು ಕಾಡುವ ಪಾಲಿಸಿಸ್ಟಿಕ್ ಒವೇರಿಯನ್ ಡಿಸೀಸ್ (ಪಿಸಿಒಡಿ) ಎಂಬ ಹಾರ್ಮೋನ್ ಅವ್ಯವಸ್ಥೆಯಿಂದ ಬಾಧಿತರಾದವರು ವಿಭಾ. ತಾಯಿ ಹೋಮಿಯೊಪಥಿ ವೈದ್ಯೆಯಾಗಿದ್ದರಿಂದ ಆರೋಗ್ಯದ ಕುರಿತು ಮೊದಲಿನಿಂದಲೂ ಜಾಗೃತಿಯನ್ನು ಹೊಂದಿದ್ದ ಆಕೆ, ಪಿಸಿಒಡಿಯಿಂದ ಮುಕ್ತಿ ಹೊಂದಲು ಔಷಧಿಯೊಂದೇ ಪರಿಹಾರವೇ ಎಂಬ ಪ್ರಶ್ನೆಯನ್ನು ಕೇಳಿಕೊಂಡರು. ಸಮಗ್ರ ಆರೋಗ್ಯ ರಕ್ಷಣೆಗೆ ಯಾವ ಹಾದಿಯನ್ನು ತುಳಿಯಬಹುದು ಎಂಬ ಪ್ರಯೋಗಕ್ಕೂ ತಮ್ಮನ್ನು ಒಡ್ಡಿಕೊಂಡರು. ‘ಶಸ್ತ್ರಚಿಕಿತ್ಸೆಯಿಂದ ದೂರ ಉಳಿಯಲು ಶಿಸ್ತುಬದ್ಧ ಜೀವನದೊಂದಿಗೆ ನಿನ್ನದೇ ಆರೋಗ್ಯದ ಹಾದಿಯನ್ನು ಹುಡುಕಿಕೋ’ ಎನ್ನುವ ಅಮ್ಮನ ಮಾತು ಬೇರೆ ತಲೆಯಲ್ಲಿ ಗಿರಕಿ ಹೊಡೆಯುತ್ತಿತ್ತಂತೆ.

ನಿದ್ರೆಯ ಸಮಸ್ಯೆಯಿಂದ ಬಳಲುವವರು, ಚರ್ಮದ ಬಣ್ಣಗೆಡುವಂತಹ ತೊಂದರೆ ಅನುಭವಿಸುವವರು ಬೇರೆ ಔಷಧಿಗೆ ಹೋಗದೆ ತಮ್ಮನ್ನು ತಾವೇ ಗುಣಪಡಿಸಿಕೊಳ್ಳಬಹುದು ಎನ್ನುವ ಫಲಿತಾಂಶವನ್ನು ಅವರ ಪ್ರಯೋಗಗಳು ನೀಡಿದವಂತೆ. ಕಾಸ್ಮಿಕ್ಸ್ ಹುಟ್ಟಲು ಕಾರಣವಾದ ಹಿನ್ನೆಲೆ ಇದು ಎಂದು ವಿಭಾ ವಿವರಿಸುತ್ತಾರೆ.

‘ನೈಸರ್ಗಿಕವಾಗಿ ದೊರೆಯುವ ಗಿಡಮೂಲಿಕೆ ಹಾಗೂ ಬೇರುಗಳ ಪುಡಿಯನ್ನು ಆಹಾರದ ಜತೆಗೆ ಸೇವಿಸಿದರೆ ನಿದ್ರಾಹೀನತೆ, ಬಣ್ಣಗೆಡುವುದು, ಕೂದಲು ಉದುರುವುದು, ರೋಗ ನಿರೋಧಕ ಶಕ್ತಿಯಿಲ್ಲದೆ ಬಳಲುವುದು ಇವೇ ಮುಂತಾದ ಸಮಸ್ಯೆಗಳಿಂದ ಮುಕ್ತಿ ಹೊಂದಬಹುದು’ ಎಂಬುದು ಈ ಯುವ ಉದ್ಯಮಿಯ ದೃಢವಾದ ನಂಬಿಕೆ. ‘ಗಿಡಮೂಲಿಕೆಗಳ ಕುರಿತಂತೆ ನಾನು ಸಂಶೋಧನೆ, ಅಧ್ಯಯನ ನಡೆಸಿದಷ್ಟೂ ಹೊಸ ಹೊಸ ವಿಷಯಗಳು ಗೊತ್ತಾಗುತ್ತಾ ಹೋದವು. ಈ ಗಿಡಮೂಲಿಕೆಗಳ ಬಗೆಗೆ, ಇವುಗಳ ಶಕ್ತಿಯ ಬಗೆಗೆ ನಾನು ಜಗತ್ತಿಗೆ ಹೇಳಬೇಕಾದುದು ಬಹಳಷ್ಟಿದೆ ಎನಿಸಿತು’ ಎನ್ನುತ್ತಾರೆ ವಿಭಾ.

ಯಾವ, ಯಾವ ಗಿಡಮೂಲಿಕೆಗಳನ್ನು ಎಷ್ಟು ಮಿಶ್ರಣ ಮಾಡಬೇಕು ಎಂಬುದನ್ನು ನಿರ್ಧರಿಸಲು ವಿಭಾ, ವೈದ್ಯರು ಹಾಗೂ ಪೌಷ್ಟಿಕಾಂಶ ತಜ್ಞರ ನೆರವು ಪಡೆದರು. ಒಂದೊಮ್ಮೆ ಮಿಶ್ರಣದ ಫಾರ್ಮುಲಾ ಸಿದ್ಧವಾದ ಮೇಲೆ ಮುಂದಿದ್ದ ಪ್ರಶ್ನೆ, ‘ಈ ಗಿಡಮೂಲಿಕೆಗಳನ್ನು ಎಲ್ಲಿಂದ ತರಿಸುವುದು’ ಎಂಬುದು. ‘ಔಷಧಿ ಸಸ್ಯಗಳ ಆಗರವಾಗಿರುವ ಭಾರತದಲ್ಲಿ ಈ ಗಿಡಮೂಲಿಕೆಗಳು ಸಿಕ್ಕೇ ಸಿಗುತ್ತವೆ ಎನ್ನುವ ಆಶಾಭಾವವಿತ್ತು. ಅಂತಹ ಮೂಲಗಳನ್ನು ಕಂಡುಕೊಂಡೆ’ ಎಂದು ವಿಭಾ ಹೇಳುತ್ತಾರೆ. ಇಂಡಸ್ಟ್ರಿಯಲ್ ಎಂಜಿನಿಯರಿಂಗ್‌ನಲ್ಲಿ ಪದವೀಧರೆಯಾಗಿರುವ ಅವರು, ಏರೋಸ್ಪೇಸ್ ಕ್ಷೇತ್ರದಲ್ಲಿ ಕೆಲಕಾಲ ವೃತ್ತಿಯನ್ನೂ ಮಾಡಿದವರು.

ಕಾಸ್ಮಿಕ್ಸ್ ಉದ್ಯಮವನ್ನು ಆಕೆ ಕಳೆದ ಡಿಸೆಂಬರ್‌ನಲ್ಲಿ ಅಧಿಕೃತವಾಗಿ ಆರಂಭಿಸಿದರು. ಆದರೆ, ಅದಕ್ಕಿಂತ ಕೆಲವು ತಿಂಗಳು ಮುಂಚೆ ತಮ್ಮ ಮಿಶ್ರಣ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಪರೀಕ್ಷೆಗೆ ಒಡ್ಡಿದರು. ಇವರಿಂದ ಮಿಶ್ರಣ ಪಡೆದ 60 ಜನರಲ್ಲಿ ಬಹುಪಾಲು ಜನ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು. ಎರಡು ತಿಂಗಳು ಈ ಗಿಡಮೂಲಿಕೆಗಳ ಪುಡಿಯನ್ನು ಸೇವಿಸಿದವರಲ್ಲಿ ಎದ್ದು ಕಾಣುವಂತಹ ಬದಲಾವಣೆ ಕಾಣುತ್ತಿತ್ತು.

ಜನರ ಆರೋಗ್ಯ ಸಮಸ್ಯೆಗೆ ಸುಲಭದ ಪರಿಹಾರ ಒದಗಿಸುವ ಜತೆಗೆ ಸ್ವಂತ ಉದ್ಯಮವನ್ನೂ ಮಾಡುತ್ತೇನೆ ಎಂದು ಹೊರಟುನಿಂತ ವಿಭಾಗೆ ಅಪ್ಪ–ಅಮ್ಮನಿಂದ ಒಪ್ಪಿಗೆ ಪಡೆಯುವುದು ಕಷ್ಟವಾಗಲಿಲ್ಲ. ‘ಉದ್ಯಮ ಮಾಡುತ್ತೇನೆ ಎಂದು ನಾನು ಹೇಳಿದಾಗ ಅಪ್ಪ–ಅಮ್ಮ ಬೆನ್ನುತಟ್ಟಿ ಹುರಿದುಂಬಿಸಿದರು’ ಎಂದು ನಗುತ್ತಾ ಹೇಳುತ್ತಾರೆ ಆಕೆ.

ಈ ಗಿಡಮೂಲಿಕೆಗಳನ್ನು ನಿಮ್ಮ ಗ್ರಾಹಕರು ಹೇಗೆ ಬಳಸುತ್ತಾರೆ ಎಂದು ಕೇಳಿದರೆ, ‘ಕೆಲವರು ಹಾಲಿನ ಜತೆ, ಇನ್ನು ಕೆಲವರು ಖೀರಿನ ಜತೆ ಮಿಶ್ರಣ ಮಾಡಿ ಕುಡಿಯುತ್ತಾರೆ. ಕೆಲವರಂತೂ ದೋಸೆಯ ಹಿಟ್ಟಿನಲ್ಲಿ ಮಿಶ್ರಣ ಮಾಡಿ, ದೋಸೆ ಹುಯ್ದುಕೊಂಡು ತಿನ್ನುತ್ತಾರೆ’ ಎಂದು ಅವರು ಹೇಳುತ್ತಾರೆ. ‘ಸ್ಲೀಪ್ ಲೈಕ್ ಬೇಬಿ’, ‘ಫೀಲ್ ಗುಡ್ ಸ್ಕಿನ್’, ‘ಹ್ಯಾಪಿ ಗಟ್’ ಎಂಬ ಅವರ ಮಿಶ್ರಣ ಪುಡಿಗಳು ಸಹ ಮಸಾಲೆ ದೋಸೆಯಂತೆಯೇ ಖರ್ಚಾಗುತ್ತಿವೆಯಂತೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65